# ಗಿರೀಶ್ ಕಾರ್ನಾಡರ ನಾಟಕಗಳಲ್ಲಿ ಚಿತ್ರರಂಗದ ಪರಿಕಲ್ಪನೆ ಅಭಿವ್ಯಕ್ತಿ ಹಾಗೂ ಆಶಯಗಳು

**ಡಾ.ಕೆ ಎಸ್ ಶಿವಪ್ರಕಾಶ**
**ಕನ್ನಡ ಉಪನ್ಯಾಸಕರು**

ಯಯಾತಿ, ತುಘಲಕ್, ಹಯವದನ, ತಲೆದಂಡ, ನಾಗಮಂಡಲ, ಅಗ್ನಿ ಮತ್ತು ಮಳೆ, ಹಿಟ್ಟಿನ ಹುಂಜ, ಅಂಜುಮಲ್ಲಿಗೆ ಮುಂತಾದ ಕಾರ್ನಾಡರ ನಾಟಕ ಕೃತಿಗಳು ಭಾರತೀಯ ಚಲನಚಿತ್ರಗಳಾಗಿ ರಾಷ್ಟ್ರೀಯ ಪ್ರಶಸ್ತಿಗಳನ್ನು ಪಡೆದ ಸಾಲಿನಲ್ಲಿವೆ. ಅಲ್ಲದೆ ಹಲವಾರು ಭಾಷೆಗಳ ಚಲನಚಿತ್ರಗಳಲ್ಲಿ ನಟಿಸಿರುವ ಕಾರ್ನಾಡರ ಪ್ರಶಸ್ತಿ ವಿಜೇತ ಚಲನಚಿತ್ರ ನಿರ್ದೇಶಕರೂ ಹೌದು. 'ವಂಶವೃಕ್ಷ', 'ತಬ್ಬಲಿಯು ನೀನಾದೆ ಮಗನೆ', 'ಕಾಡು', 'ಒಂದಾನೊಂದು ಕಾಲದಲ್ಲಿ', 'ಕಾನೂರು ಹೆಗ್ಗಡತಿ;, 'ಉತ್ಸವ್' ಮುಂತಾದ ಸಿನಿಮಾಗಳು; ಸೂಫಿ ಪಂಥ, ಕನಕ ಪುರಂದರ ಸಾಕ್ಷ್ಯಚಿತ್ರಗಳನ್ನು ನಿರ್ದೇಶಿಸಿದ್ದಾರೆ. ನಾಟಕ ಸಾಹಿತ್ಯ ರಚನೆಗೆ ಜ್ಞಾನಪೀಠ ಪ್ರಶಸ್ತಿ ಪಡೆದ ಕಾರ್ನಾಡರು ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಗುಬ್ಬಿವೀರಣ್ಣ, ಹಾಗೂ ಕರ್ನಾಟಕ ವಿಶ್ವವಿದ್ಯಾಲಯದಿಂದ ಗೌರ ಡಾಕ್ಟರೇಟ್ ಪದವಿಯನ್ನು ಪಡೆದಿದ್ದಾರೆ. ಸಾಹಿತ್ಯ ಕ್ಷೇತ್ರದಲ್ಲಿ ನಾಟಕಗಳನ್ನು ಮಾತ್ರ ರಚಿಸಿ ಜ್ಞಾನಪೀಠ ಪ್ರಶಸ್ತಿಗೆ ಪುರಸ್ಕೃತರಾದವರಲ್ಲಿ ಕಾರ್ನಾಡರು ಮೊದಲಿಗರು. ಗಿರೀಶ ಕಾರ್ನಾಡರ ನಾಟಕಗಳು ಇಂಗ್ಲಿಷ್ ಭಾಷೆಯೂ ಸೇರಿದಂತೆ, ಪ್ರಯೋಗ ಭಾರತಕ್ಕೆ ಮಾತ್ರ ಸೀಮಿತವಾಗಿರದೆ ಇಬ್ರಾಹಿಂ ಅಲ್ಕಾಜಿಯವರು ನಿರ್ದೇಶಿಸಿದ 'ತುಘಲಕ್' ವಿದೇಶ ಸಂಚಾರವನ್ನಾ ಕೈಗೊಂಡಿತ್ತು. 'ಹಯವದನ' ಆಸ್ಟ್ರೇಲಿಯಾ, ಜರ್ಮನಿಗಳಲ್ಲಿ ಅಲ್ಲಿನವರಿಂದಲೇ ಪ್ರಯೋಗಗೊಂಡಿತ್ತು. 'ನಾಗಮಂಡಲ'ವನ್ನು ಅಮೇರಿಕದ 'ಗಥ್ರಿ ಥಿಯೇಟರಿನವರು ಪ್ರದರ್ಶಿಸಿದರು. ಹೀಗೆ 'ಜ್ಞಾನಪೀಠ' ಬರುವ ಮುನ್ನವೇ ಕಾರ್ನಾಡರು ರಾಷ್ಟ್ರೀಯ, ಅಂತರಾಷ್ಟ್ರೀಯ ಖ್ಯಾತಿಯನ್ನು ಗಳಿಸಿದ್ದರು. ಕನ್ನಡ ರಂಗಭೂಮಿಯಂತೂ ಕಾರ್ನಾಡರಿಗೆ ಋಣಿಯಾಗಿದೆ. 70ರ ದಶಕದ ಬಯಲು ರಂಗೋತ್ಸವದ ಯಶಸ್ಸಿಗೆ ಅವರ ನಟನೆಯೂ ಒಂದು ಕಾರಣ. ಈಡಿಪಸ್ ನಾಟಕದಲ್ಲಿ ದೊರೆ ಈಡಿಪಸ್ ಪಾತ್ರವನ್ನು ಅವರೇ ವಹಿಸಿದ್ದರು. ಮುಂದೆ ಅವರು ರಂಗಭೂಮಿಯಲ್ಲಿ ನಟಿಸದಿದ್ದರೂ ಅವರ ನಾಟಕಗಳು ದೇಶವಿದೇಶಗಳಲ್ಲಿ ಯಶಸ್ವಿಯಾಗಿರುವಂತೆ ಕನ್ನಡದಲ್ಲೂ ಯಶಸ್ಸು ಕಂಡಿವೆ.

ಭಾರತೀಯ ಸಾಹಿತ್ಯ ಪರಂಪರೆಯಲ್ಲಿ ಸಣ್ಣಕಥೆ, ಕಾದಂಬರಿ, ಕಾವ್ಯ, ನಾಟಕಗಳು ಸೃಜನಶೀಲ ಬರಹದ ಸತ್ವವನ್ನು ಹೆಚ್ಚಿಸಿವೆ. ಇಲ್ಲಿನ ಪ್ರತಿ ಬರಹವು ಭಾರತೀಯ ಸಾಮಾಜಿಕ ಪ್ರಜ್ಞೆಯನ್ನು ಧಾರ್ಮಿಕ ಧಾರೆಗಳನ್ನು ಸರಿಪಡಿಸುವ ಸೇತುವೆಗಳಾಗಿ ತಮ್ಮ ಕಾರ್ಯವನ್ನು ಮಾಡುತ್ತಾ ಬಂದಿವೆ. ಇಂತಹ ಬರಹಗಳು ಪ್ರಪಂಚದ ಸಾಹಿತ್ಯ ಲೋಕವನ್ನು ಬೆರಗುಗೊಳಿಸುವ ಅನೇಕ ಕವಿಗಳು, ಕಾದಂಬರಿಕಾರರು, ನಾಟಕ ರಚನೆಕಾರರು, ಬುದ್ಧಿಜೀವಿಗಳು ಬೌದ್ಧಿಕತೆಗೆ ಸಾಕ್ಷಿಯಾಗಿದ್ದಾರೆ. ಅಂತಹ ಲೇಖಕರಲ್ಲಿ ಗಿರೀಶ್ ಕಾರ್ನಾಡರು ನಾಡು ಕಂಡ ಅದ್ಭುತ ಬರಹಗಾರರು. ಅನೇಕ ಕಥೆ, ಕಾದಂಬರಿಗಳನ್ನು ಬರೆದಿದ್ದರೂ ಸಹ ಅವರ ನಾಟಕಗಳು ಪ್ರಖ್ಯಾತಿಯಲ್ಲಿ ನಿಂತಿವೆ. ಕಾರ್ನಾಡರು ಎಲ್ಲ ಸೀಮೆಗಳನ್ನು ಮೀರಿದ ಕನ್ನಡ ಸಾಹಿತ್ಯದ ಪ್ರಸಿದ್ಧ ರಂಗಭೂಮಿಯ ತಜ್ಞರಾಗಿ, ನಾಟಕಕಾರರಾಗಿ, ಚಲನಚಿತ್ರ ರಂಗದ ನಟರಾಗಿ, ನಿರ್ದೇಶಕರಾಗಿ, ಪ್ರಾಚಾರ್ಯರಾಗಿ, ಸಂಗೀತ ನಾಟಕ ಅಕಾಡೆಮಿಯ ಅಧ್ಯಕ್ಷರಾಗಿ ಹೀಗೆ ಅವರು ಹಲವು ರಂಗಗಳಲ್ಲಿ ರಾಜ್ಯ, ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಬೆಳೆದವರು. ಪುಣೆಯಲ್ಲಿರುವ ಫಿಲಂ ಆಂಡ್ ಟೆಲಿವಿಷನ್ ಇನ್ಸಿಟಿಟ್ಯೂಟ್‌ನ ನಿರ್ದೇಶಕ ಪದವಿ ಗಿರೀಶರಿಗೆ ದೊರೆತಿದ್ದು ಅತ್ಯಂತ ಮಹತ್ವ ಪೂರ್ಣ ಸಂಗತಿ. ಕನ್ನಡದಲ್ಲಿ ನಾಟಕ ರಚಿಸುತ್ತ ಇತರೆ ಭಾರತೀಯ ಭಾಷೆಗಳೊಡನೆ ಸಂಪರ್ಕವನ್ನಿಟ್ಟುಕೊಂಡ ಸಾಂಸ್ಕೃತಿಕ ವಕ್ತಾರರಾಗಿ ಕೆಲಸ ಮಾಡಿದವರು. ತುಘಲಕ್ ನಾಟಕವು ಮರಾಠಿ ಮತ್ತು ಹಿಂದಿಯಲ್ಲಿಯೂ, ನಾಗಮಂಡಲ ಇಂಗ್ಲಿಷಿಗೆ ಅನುವಾದಗೊಂಡಿದೆ. ಅವರ ನಾಟಕಗಳು ಭಾರತೀಯ ಮತ್ತು ವಿದೇಶಿಯ ಭಾಷೆಗಳ ರಂಗಭೂಮಿಯಲ್ಲಿ ಪ್ರಯೋಗಗೊಂಡು ವಿಮರ್ಶಕರ ಮನಸೆಳೆದಿವೆ.

ಯಯಾತಿ, ತುಘಲಕ್, ಹಯವದನ, ತಲೆದಂಡ, ನಾಗಮಂಡಲ, ಅಗ್ನಿ ಮತ್ತು ಮಳೆ, ಹಿಟ್ಟಿನ ಹುಂಜ, ಅಂಜುಮಲ್ಲಿಗೆ ಮುಂತಾದ ಕಾರ್ನಾಡರ ನಾಟಕ ಕೃತಿಗಳು ಭಾರತೀಯ ಚಲನಚಿತ್ರಗಳಾಗಿ ರಾಷ್ಟ್ರೀಯ ಪ್ರಶಸ್ತಿಗಳನ್ನು ಪಡೆದ ಸಾಲಿನಲ್ಲಿವೆ. ಅಲ್ಲದೆ ಹಲವಾರು ಭಾಷೆಗಳ ಚಲನಚಿತ್ರಗಳಲ್ಲಿ ನಟಿಸಿರುವ ಕಾರ್ನಾಡರ ಪ್ರಶಸ್ತಿ ವಿಜೇತ ಚಲನಚಿತ್ರ ನಿರ್ದೇಶಕರೂ ಹೌದು. 'ವಂಶವೃಕ್ಷ', 'ತಬ್ಬಲಿಯು ನೀನಾದೆ ಮಗನೆ', 'ಕಾಡು', 'ಒಂದಾನೊಂದು ಕಾಲದಲ್ಲಿ', 'ಕಾನೂರು ಹೆಗ್ಗಡತಿ;, 'ಉತ್ಸವ್' ಮುಂತಾದ ಸಿನಿಮಾಗಳು; ಸೂಫಿ ಪಂಥ, ಕನಕ ಪುರಂದರ ಸಾಕ್ಷ್ಯಚಿತ್ರಗಳನ್ನು ನಿರ್ದೇಶಿಸಿದ್ದಾರೆ. ನಾಟಕ ಸಾಹಿತ್ಯ ರಚನೆಗೆ ಜ್ಞಾನಪೀಠ ಪ್ರಶಸ್ತಿ ಪಡೆದ ಕಾರ್ನಾಡರು ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಗುಬ್ಬಿವೀರಣ್ಣ, ಹಾಗೂ ಕರ್ನಾಟಕ ವಿಶ್ವವಿದ್ಯಾಲಯದಿಂದ ಗೌರ ಡಾಕ್ಟರೇಟ್ ಪದವಿಯನ್ನು ಪಡೆದಿದ್ದಾರೆ. ಸಾಹಿತ್ಯ ಕ್ಷೇತ್ರದಲ್ಲಿ ನಾಟಕಗಳನ್ನು ಮಾತ್ರ ರಚಿಸಿ ಜ್ಞಾನಪೀಠ ಪ್ರಶಸ್ತಿಗೆ ಪುರಸ್ಕೃತರಾದವರಲ್ಲಿ ಕಾರ್ನಾಡರು ಮೊದಲಿಗರು. ಗಿರೀಶ ಕಾರ್ನಾಡರ ನಾಟಕಗಳು ಇಂಗ್ಲಿಷ್ ಭಾಷೆಯೂ ಸೇರಿದಂತೆ, ಪ್ರಯೋಗ ಭಾರತಕ್ಕೆ ಮಾತ್ರ ಸೀಮಿತವಾಗಿರದೆ ಇಬ್ರಾಹಿಂ ಅಲ್ಕಾಜಿಯವರು ನಿರ್ದೇಶಿಸಿದ 'ತುಘಲಕ್' ವಿದೇಶ ಸಂಚಾರವನ್ನಾ ಕೈಗೊಂಡಿತ್ತು. 'ಹಯವದನ' ಆಸ್ಟ್ರೇಲಿಯಾ, ಜರ್ಮನಿಗಳಲ್ಲಿ ಅಲ್ಲಿನವರಿಂದಲೇ ಪ್ರಯೋಗಗೊಂಡಿತ್ತು. 'ನಾಗಮಂಡಲ'ವನ್ನು ಅಮೇರಿಕದ 'ಗಥ್ರಿ ಥಿಯೇಟರಿನವರು ಪ್ರದರ್ಶಿಸಿದರು. ಹೀಗೆ 'ಜ್ಞಾನಪೀಠ' ಬರುವ ಮುನ್ನವೇ ಕಾರ್ನಾಡರು ರಾಷ್ಟ್ರೀಯ, ಅಂತರಾಷ್ಟ್ರೀಯ ಖ್ಯಾತಿಯನ್ನು ಗಳಿಸಿದ್ದರು. ಕನ್ನಡ ರಂಗಭೂಮಿಯಂತೂ ಕಾರ್ನಾಡರಿಗೆ ಋಣಿಯಾಗಿದೆ. 70ರ ದಶಕದ ಬಯಲು ರಂಗೋತ್ಸವದ ಯಶಸ್ಸಿಗೆ ಅವರ ನಟನೆಯೂ ಒಂದು ಕಾರಣ. ಈಡಿಪಸ್ ನಾಟಕದಲ್ಲಿ ದೊರೆ ಈಡಿಪಸ್ ಪಾತ್ರವನ್ನು ಅವರೇ ವಹಿಸಿದ್ದರು. ಮುಂದೆ ಅವರು ರಂಗಭೂಮಿಯಲ್ಲಿ ನಟಿಸದಿದ್ದರೂ ಅವರ ನಾಟಕಗಳು ದೇಶವಿದೇಶಗಳಲ್ಲಿ ಯಶಸ್ವಿಯಾಗಿರುವಂತೆ ಕನ್ನಡದಲ್ಲೂ ಯಶಸ್ಸು ಕಂಡಿವೆ.

**ಯಯಾತಿ**

ಇದು ಕಾರ್ನಾಡರ ಪ್ರಥಮ ನಾಟಕವಾಗಿದೆ. ಇದರಲ್ಲಿ ಪುರು ಪಾತ್ರ ಪ್ರವೇಶಿಸಿದಂತೆಯೇ ನಾಟಕ ವರ್ತಮಾನಕ್ಕೆ ಬಂದು ಬಿಡುತ್ತದೆ. ಪುರು ತನ್ನ ಯೌವನವನ್ನು ತನ್ನ ತಂದೆ ಯಯಾತಿ ಮಹಾರಾಜನಿಗೆ ಕೊಟ್ಟು ಅವನ ಮುಪ್ಪು ಧರಿಸಿ ತಾನು ಅದೇ ತಾನೆ ವರಿಸಿರುವ ತನ್ನ ಪತ್ನಿ ಚಿತ್ರಲೇಖೆ ಇರುವ ಶಯ್ಯಾಗೃಹಕ್ಕೆ ಪ್ರವೇಶಿಸುತ್ತಾನೆ. ಶಯ್ಯಾಗೃಹ ವಧೂವರರ ಸಮಾಗಮಕ್ಕೆ ಅಲಂಕೃತವಾಗಿದೆ. ಪುರು ಪ್ರವೇಶಿಸಿದಂತೆ ಶಯ್ಯಾಗೃಹದ ದೀಪದ ಬೆಳಕನ್ನು ಭರಿಸಲಾಗದೆ ಬೆಳಕನ್ನು ಆರಿಸೆಂದು ಪತ್ನಿಗೆ ನಿವೇದಿಸಿಕೊಳ್ಳುತ್ತಾನೆ. ಪುರುವಿನ ಪ್ರವೇಶದ ಮುನ್ನವೇ ಪುರುವಿನ ಪತ್ನಿ ಚಿತ್ರಲೇಖೆಯ ಪ್ರಕ್ರಿಯೆಗೆ ಲೇಖಕರು ಆಸ್ತಿಭಾರ ಹಾಕಿದ್ದಾರೆ. ಮುಪ್ಪನ್ನು ಯೌವ್ವನದೊಡನೆ ವಿನಿಮಯ ಮಾಡಿಕೊಂಡು ಅವನ ವಂಶದಲ್ಲೇ ಯಾರೂ ತೋರದ ಪರಾಕ್ರಮ ತನ್ನ ಗಂಡ

ತೋರಿರುವನೆಂದು ಚಿತ್ರಲೇಖೆ ಹೆಮ್ಮೆಪಡುತ್ತಿರುವಾಗ ಪುರುವಿನ ಮುಪ್ಪಿನ ಮೂರ್ತಸ್ವರೂಪ ನೋಡಿ ಆಘಾತಕ್ಕೀಡಾಗುತ್ತಾಳೆ. ಅನಂತರ ಚಿತ್ರಲೇಖೆ ಅಸುನೀಗುತ್ತಾಳೆ. ಯಯಾತಿ ಸೊಸೆಯ ಹೆಣವನ್ನು ಕಂಡು ತನ್ನ ತಪ್ಪಿನ ಪರಿಣಾಮವನ್ನು ಎದುರಿಸುವುದಕ್ಕೆ ಶಯ್ಯಾಗೃಹಕ್ಕೆ ಕೇಂದ್ರಸ್ಥಳ ಎಂದು ಅಲ್ಲೇ ಇರಲು ಪ್ರಾರಂಭಿಸುತ್ತಾನೆ. ಬಹುಶಃ ಪ್ರಪಂಚದ ಯಾವುದೇ ಶ್ರೇಷ್ಠ ನಾಟಕದಲ್ಲೂ ಇಂಥಾ ಒಂದು ಶ್ರೇಷ್ಠ ಶಯ್ಯಾಗೃಹದ ನಿರ್ಮಾಣ ಕಷ್ಟದ ಮಾತು.

**ತುಘಲಕ್**

ಕಾರ್ನಾಡರ ಮತ್ತೊಂದು ಮಹತ್ವದ ಕೃತಿಯಾದ ತುಘಲಕ್ ನಾಟಕದಲ್ಲಿ, ತುಘಲಕ್ ಚದುರಂಗದಾಟದ ಪ್ರೇಮಿ. ಈ ಆಟದಲ್ಲಿ ಸಾಮಾನ್ಯ ಸಿಪಾಯಿ ಮೇಲಕ್ಕೆ ಚಲಿಸಿ ತನ್ನ ಗುರಿ ಮುಟ್ಟಿದರೆ ಮಂತ್ರಿಯಾಗಬಲ್ಲ. ದೊರೆಯೂ ಆಗಬಲ್ಲ. ನಾಟಕದಲ್ಲಿ ದೊರೆ ತನ್ನ ಜನರನ್ನು ಪಗಡೆಕಾಯಿಗಳಂತೆ ತನ್ನ ಉದ್ದೇಶಕ್ಕೆ ಬಳಸಿಕೊಳ್ಳುವುದು, ನಾಟಕದ ಹಾಸಿನಲ್ಲಿ ಸಾಮಾನ್ಯ ಕೊಲೆಗಾರ, ಕಳ್ಳನೊಬ್ಬ ಮೇಲೇರಿ ಕಡೆಯಲ್ಲಿ ದೊರೆಗೆ ಸರಿಸಮಾನವಾಗಿ ನಿಲ್ಲುವುದು 'ತುಘಲಕ್' ನಾಟಕದ, ಚದುರಂಗದ ಹಾಸಿನ ಸಂವಿಧಾನದ ಕ್ರೂರ ವ್ಯಂಗ್ಯಗಳು. ಅಂತೆಯೇ ತುಘಲಕ್ ಕನಸುವ ಗುಲಾಬಿ ಉದ್ಯಾನವನ ವಾಸ್ತವದಲ್ಲಿ ಶವಗಳ ಕಾರ್ಯಾಗಾರಗಳಾಗುವುದು. ಹೀಗೆ ಬರೆಯುತ್ತ ಹೋದಷ್ಟೂ ತುಘಲಕ್ ನಾಟಕದ ಶ್ರೇಷ್ಠತೆ, ಮಹತ್ವತೆ ಹೆಚ್ಚುತ್ತದೆ. ಕಾರ್ನಾಡರು ತಮ್ಮ ಮನಸ್ಸನ್ನು ನಾಟಕ ರಚನೆಯಲ್ಲಿ ನೆಟ್ಟು ತಮ್ಮ ದೇಹವನ್ನು ಚಲನಚಿತ್ರದಲ್ಲಿ ತೊಡಗಿಸಿಕೊಂಡವರು. ಕಿರು ಮತ್ತು ದೊಡ್ಡ ತೆರೆಯಲ್ಲಿ ಅಭಿನಯಿಸುತ್ತ, ಚಿತ್ರಕಥೆಗಳನ್ನು ಬರೆಯುತ್ತಾ ಒಮ್ಮೊಮ್ಮೆ ಚಿತ್ರಗಳನ್ನು ನಿರ್ದೇಸುತ್ತ ತಮ್ಮ ಮನಸ್ಸಿನಲ್ಲಿ ಕಾಡುತ್ತಿರುವ ನಾಟಕಗಳ ಶಿಲ್ಪವನ್ನು ಕಡೆದವರು. ಚಲನಚಿತ್ರ ಕ್ಷೇತ್ರಕ್ಕೂ ಅವರ ಕೊಡುಗೆ ಗಣನೀಯ. ಅರವತ್ತರ ದಶಕದಲ್ಲಿ ಅವರು ಚಿತ್ರಕಲೆ ರಚಿಸಿ ಅಭಿನಯಿಸಿದ 'ಸಂಸ್ಕಾರ' ರಾಷ್ಟ್ರ ಪ್ರಶಸ್ತಿಯನ್ನು ಗಳಿಸಿದ್ದಲ್ಲದೆ, ಕನ್ನಡ ಚಿತ್ರರಂಗದಲ್ಲಿ ಹೊಸ ಅಲೆಯನ್ನೇ ಎಬ್ಬಿಸಿತು. ಪ್ರತಿಭಾವಂತ ಯುವ ನಿರ್ದೇಶಕರು ಸಮಾಜದ ವಾಸ್ತವತೆಗಳನ್ನು ಪ್ರತಿಬಿಂಬಿಸುವಂಥ ಚಿತ್ರಗಳನ್ನು ತೆಗೆಯಲು ಧೈರ್ಯವನ್ನು ದೊರಕಿಸಿಕೊಟ್ಟಿತು. ಕನ್ನಡ ಚಿತ್ರರಂಗ ರಾಷ್ಟ್ರೀಯ , ಅಂತರರಾಷ್ಟ್ರೀಯ ರಂಗದಲ್ಲಿ ಮನ್ನಣೆ ಗಳಿಸಿತು. ಕಾರ್ನಾಡರು ಸ್ವಯಂ ನಿರ್ದೇಶಿಸಿದ ಚಿತ್ರಗಳು ಒಂದಾನೊಂದು ಕಾಲದಲ್ಲಿ', 'ಕಾಡು', 'ಕಾನೂರು ಹೆಗ್ಗಡತಿ', ಹಿಂದಿಯಲ್ಲಿ 'ಉತ್ಸವ್', 'ಚೆಲ್ವಿ', ಇತ್ಯಾದಿ. ನಟರಾಗಿ ಶ್ಯಾಂ ಬೆನೆಗಲ್ ಅವರ ನಿಶಾಂತ್, ಮಂಥನ್, ಭೂಮಿಕಾ, ಶಂಕರನಾಗರ ಮಾಲ್ಗುಡಿ ಡೇಸ್, ಕನ್ನಡ ಮತ್ತು ತೆಲುಗಿನ ಆನಂದ ಭೈರವಿ, ಮೈಸೂರು ಮಲ್ಲಿಗೆ, ಸಂತ ಶಿಶುನಾಳ ಶರೀಫ್ ಹೀಗೆ ಹಲವಾರು ನೆನಪುಗಳು ಮರುಕಳಿಸುತ್ತವೆ. ಎಪ್ಪತ್ತರ ದಶಕದಲ್ಲಿ ಬಂದ ಮಹಾನ್ ಪ್ರತಿಭೆಗಳಾದ ನಾಸಿರುದ್ದೀನ್ ಷಾ, ಓಂ ಪುರಿ, ಗಿರೀಶ್ ಕಾಸರವಳ್ಳಿ, ಮುಂತಾದ ಹಲವಾರರು ಪ್ರಸಿದ್ಧರು ಗಿರೀಶರು ಪೂನಾ ಫಿಲಂ ಇನ್ಸ್ಟಿಟ್ಯೂಟಿನಲ್ಲಿದ್ದಾಗ ಮೂಡಿಬಂದವರು. ಓಂ ಪುರಿಯಂತವ ನಟನೆಗೆ ಯೋಗ್ಯನೆ ಎಂಬುದನ್ನು ಪ್ರಶ್ನಿಸಿದ್ದ ಅಂದಿನ ಕಾಲದಲ್ಲಿ ಆತನಲ್ಲಿದ್ದ ಪ್ರತಿಭೆಯನ್ನು ಕಂಡವರು ಗಿರೀಶ್. ಕನ್ನಡದಲ್ಲಿ ವಿಷ್ಣುವರ್ಧನ್, ಶಂಕರ್‌ನಾಗ್, ಸಿ.ಆರ್.ಸಿಂಹ ಮುಂತಾದ ಅನನ್ಯ ಪ್ರತಿಭೆಗಳನ್ನು ಹುಡುಕಿಕೊಟ್ಟವರು ಕುಡಾ ಗಿರೀಶರೆ. ಅವರು ಎಷ್ಟು ಪ್ರಾಜ್ಞರಾಗಿ ಕಲಾವಂತಿಕೆ ಹೊತ್ತ ಚಿತ್ರಗಳಲ್ಲಿ ನಟಿಸುತ್ತಾರೋ ಅಷ್ಟೇ ಸರಾಗವಾಗಿ ಕನ್ನಡ, ತಮಿಳು, ಹಿಂದಿ, ಮಲಯಾಳ, ಮರಾಠಿ ಹೀಗೆ ವಿವಿಧ ಭಾಷೆಗಳ ಕಮರ್ಷಿಯಲ್ ಹಣೆಪಟ್ಟಿಯ ಚಿತ್ರಗಳಲ್ಲೂ ಸರಾಗವಾಗಿ ಎಂಬಂತೆ ನಟಿಸಿ ಬರುವುದನ್ನು ಕಂಡು ಇವರ ಅಪ್ರತಿಮ ವೈವಿಧ್ಯತೆಯ ಕುರಿತಾಗಿ ಅಚ್ಚರಿ ಹುಟ್ಟುತ್ತದೆ. ಗಿರೀಶರ ಆತ್ಮಚರಿತ್ರೆಯಾದ 'ಆಡಾಡ್ತ ಆಯುಷ್ಯ' ನಮ್ಮ ಕಾಲದಲ್ಲಿ ಮೂಡಿ ಬಂದ ಹೊಸ ನಿಟ್ಟಿನ ಬದುಕಿನ, ನವ್ಯ ಕಾಲದ ಸಾಹಿತ್ಯ ರಂಗಭೂಮಿ, ಸಿನಿಮಾ, ಲಲಿತ ಕಲೆ ಮತ್ತು ಸಾಂಸ್ಕೃತಿಕ ಜಗತ್ತಿನ ಬಹುದೊಡ್ಡ ಜಗತ್ತನ್ನೇ ನಮ್ಮ ಕಣ್ಣೆದುರು ತೆರೆದಿಡುವಂತದ್ದಾಗಿದೆ.

**ಹಯವದನ**

ಮನುಜನ ಅಪರಿಪೂರ್ಣತೆಗೆ ಕಾರ್ನಾಡರ ಹಯವದನ ಸಾಕ್ಷಿಯಾಗಿದೆ. ನಾಟಕ ಆರಂಭ ಆಗುವುದು ಗಣೇಶನ ಅಪೂರ್ಣತೆಯ ಉಲ್ಲೇಖನದಿಂದ. ಇಲ್ಲಿ ಕಂಡುಬರುವುದು ಬರೇ ಮೂರು ಮುಖ್ಯ ಪಾತ್ರಗಳು- ಪದ್ಮಿನಿ, ದೇವದತ್ತ ಹಾಗೂ ಕಪಿಲ ಇಲ್ಲಿ ಅಪರಿಪೂರ್ಣತೆಯ ಪ್ರತೀಕ ಅನ್ನುವಂತೆ ಹಯವದನನಿದ್ದಾರೆ. ಇಲ್ಲಿನ ಕಥೆ ಸಾಮಾನ್ಯವಾಗಿ ಗೊತ್ತಿರುವಂತಹದೆ. ಯಾವುದೇ ಕಾರಣಕ್ಕೆ ಇಬ್ಬರು ಮನುಷ್ಯರ ತಲೆ ಅದಲು ಬದಲಾದರೆ, ತಲೆ ಇರುವವನನ್ನು ಅವನ ಹೆಸರಿನಿಂದ ಗುರುತಿಸುತ್ತೇವೆ. ಯಾಕೆಂದರೆ ತಲೆ ಮುಖ್ಯ. ಈ ಸಣ್ಣ ತುಣುಕನ್ನು ಹಿಡಿದುಕೊಂಡು ಕಾರ್ನಾಡರು ತುಂಬಾ ವಿಚಾರ ಪೂರಿತ ನಾಟಕ ಬರೆದಿದ್ದಾರೆ. ದೇವದತ್ತ - ಕಪಿಲ ಇಬ್ಬರು ಗೆಳೆಯರು, ಸೂತ್ರಧಾರ ಹೇಳುವಂತೆ, ಬಾಳ ಕೊರಳ ಗೆಳೆಯರು. ದೇವದತ್ತ ಬ್ರಾಹ್ಮಣ. ಪಂಡಿತ. ತೆಳ್ಳಗೆ ಬೆಳ್ಳಗೆ, ಸುಂದರಾಂಗ - ಸುಕುಮಾರ. ಕಪಿಲ ಕಮ್ಮಾರ. ತಾಮ್ರ ವರ್ಣ. ಬಲಶಾಲಿ ಕೆಲಸದಲ್ಲಿ. ಆಟೋಟದಲ್ಲಿ ನಿಸ್ಸೀಮ. ದೇವದತ್ತ ಕುಮಾರಿಯೊಬ್ಬಳನ್ನು ಕಂಡು ಆಕೆಗೆ ಮರುಳಾಗುತ್ತಾನೆ. ಕಪಿಲನ ಸಹಾಯದಿಂದ ಆತ ಮೆಚ್ಚಿದ ಪದ್ಮಿನಿಯನ್ನು ಮದುವೆ ಆಗುತ್ತಾನೆ. ಪದ್ಮಿನಿಯನ್ನು ಮೊದಲು ಕಂಡಾಗ ಕಪಿಲ ಅಂದುಕೊಳ್ಳುತ್ತಾನೆ. ''ನನ್ನ ಮನಸ್ಸು ಯಾಕೋ ಕಸಿವಿಸಿ ಗೊಂಡಿದೆ. ನೀನು ಸುಕುಮಾರ. ಪದ್ಮಿನಿ ಅನ್ನುವುದು. '' ಕಪಿಲ ಒಬ್ಬ ಹುಂಬ. ಅದಕ್ಕೆ ಅವನ ಚೇಷ್ಟೆ ಮಾಡೋದರಲ್ಲಿ ಹೊತ್ತು ಬೇಗ ಹೋಗುತ್ತದೆ ಅಷ್ಟೆ''. ದೇವದತ್ತ ಅಂದುಕೊಳ್ಳುತ್ತಾನೆ. ಇವಳಿಗೆ ನಿಜವಾಗ್ಯೂ ತಿಳಿಯೋದಿಲ್ಲವೋ, ತಿಳಿದೂ ಹೀಗೆ ಮಾಡತಾಳೋ... ಈಗ ಇವಳನ್ನು ನೋಡಿದರೆ ಸಾಕು ಒಡತಿಯನ್ನು ಕಂಡ ನಾಯಿಯ ಹಾಗೆ ದೀನನಾಗುತ್ತಾನೆ. ಗರ್ಭಿಣಿ ಹೆಂಡತಿಯ ಜೊತೆ ಗೆಳೆಯರಿಬ್ಬರೂ ಉಜ್ಜಯನಿಗೆ ಹೋಗುವ ಕಾರ್ಯಕ್ರಮ ಹೋಗಬೇಕು. ಬೇಡದ ಹೊಯ್ದಾಟದ ನಂತರ ಹೋಗುತ್ತಾರೆ. ದೇವದತ್ತನಿಗೆ ನಿರಾಶೆ. ಉಳಿದ ಇಬ್ಬರಿಗೂ ಉತ್ಸಾಹ. ಪ್ರವಾಸ ರದ್ದಾದಾಗ ಕಪಿಲನ ಭಾವನೆಗಳು. ಇನ್ನೂ ಎಂಟು ದಿನ ಏನು ಮಾಡಲಿ? ನನ್ನಲ್ಲಿ ಈ ಪೊಳ್ಳು ಯಾಕೆ ತುಂಬಬೇಕು? ಕಪಿಲ, ಕಪಿಲ, ನಿನ್ನನ್ನು ಹಿಡಿತದಲ್ಲಿಟ್ಟುಕೋ ಜಾರತಿದ್ದೀ ಹಿಡಿತ ಬಿಡಬೇಡ. ಇಲ್ಲಿ ಪ್ರವಾಸದ ಚಿತ್ರಣದಲ್ಲಿ ಕಾರ್ನಾಡರ ಪ್ರತಿಭೆಯನ್ನು ಓದಿಯೇ ತಿಳಿದುಕೊಳ್ಳಬೇಕು. ಚಕ್ಕಡಿ ಹೋಗುವ ರೀತಿ, ಕಾಡಿನ ಸೌಂದರ್ಯ ನಮ್ಮ ಕಣ್ಣ ಮುಂದೆ ತರುತ್ತಾರೆ. ಹೂವನ್ನು ವರ್ಣಿಸುವ ರೀತಿ ಅದ್ಭುತವಾಗಿದೆ. ಪದ್ಮಿನಿಯ ಮನೋಭಾವ ಕಪಿಲ ಮರ ಹತ್ತುವಾಗ ತನ್ನಲ್ಲೇ ಅಂದುಕೊಳ್ಳುತ್ತಾಳೆ. ಚೈತನ್ಯದ ಜಲಪಾತ! ಮೈ ಮಾತ್ರ ಎಂಥ ಮೈ. ನೋಡಿದರೆ ಮೈನವಿರೇಳುತ್ತದೆ. ಯಾವ ಭಾಗ್ಯವಂತೆಯ ಪಾಲಿಗೆ ಹೋಗುತಾನೋ... ಯವ ಹೆಣ್ಣಾದರೂ ಮಾರುಹೋಗಬೇಕು.

ನಂತರ ದೇವದತ್ತ ಕಾಡಿನ ಮಧ್ಯ ಇರುವ ಕಾಳಿಕಾ ಗುಡಿಗೆ ಹೋಗಿ ಅಲ್ಲಿರುವ ಹಳೇ ಖಡ್ಗದಿಂದ. ತಾನು ಹಿಂದೆ ಪದ್ಮಿನಿಗೆ ಮರುಳಾದಾಗ ಕೊಟ್ಟ ಮಾತಿನಂತೆ ದೇವರಿಗೆ ತನ್ನ ಶಿರವನ್ನು ಅರ್ಪಿಸುತ್ತಾನೆ. ಆತನನ್ನು ಹುಡುಕುತ್ತಾ ಹೋದ ಕಪಿಲ ಸಹ ತನ್ನ ಗೆಳೆಯನಿಗಾಗಿ ಆ ದೇವತೆಗೆ ತನ್ನ ತಲೆಯನ್ನು ಬಲಿ ಕೊಡುತ್ತಾನೆ. ಇವರಿಬ್ಬರನ್ನೂ ಹುಡುಕುತ್ತಾ ಬಂದ ಬಸುರಿ ಪದ್ಮಿನಿ ಸಹ ತನ್ನ ಬಲಿದಾನಕ್ಕೆ ಸಿದ್ಧಳಾಗುತ್ತಾಳೆ. ಸಾಯುವಾಗ ಆಕೆ ಅನ್ನುವ ಮಾತು... ''ನನ್ನ ಮೇಲೆ ನಿನಗೆ ಇಷ್ಟೇ ಪ್ರೀತಿ ಇತ್ತೇನು, ಮತ್ತು ಕಪಿಲ ನೀನು? ನಾಯಿಗಣ್ಣಿಂದ ನೋಡುವ ನೀನೂ ನನ್ನ ವಿಚಾರ ಮಾಡಲಿಲ್ಲ." ಇನ್ನೊಂದು ಬಲಿದಾನಕ್ಕೆ ಮುನ್ನ ದೇವಿ ನಿದ್ದೆಯಿಂದ ಎಚ್ಚೆತ್ತು ಆಕೆಯನ್ನು ತಡೆಯುತ್ತಾಳೆ. ಅವರಿಬ್ಬರ ತಲೆಗಳನ್ನು ಜೋಡಿಸಲು ಹೇಳಿ ತಾನು ಬಂದವರಿಗೆ ಪ್ರಾಣ ದಾನ ಮಾಡುವ ಬಗೆಗೆ ಭರವಸೆ ನೀಡುತ್ತಾಳೆ. ತಲೆ ಜೋಡಿಸುವ ಮೊದಲು ಪದ್ಮಿನಿ ದೇವಿಯಲ್ಲಿ ಒಂದು ಪ್ರಶ್ನೆ ಕೇಳುತ್ತಾಳೆ. ಇಬ್ಬರಲ್ಲಿ ಒಬ್ಬನನ್ನಾಧರೂ ಉಳಿಸಿಕೊಳ್ಳಬಹುದಿತ್ತಲ್ಲ

ಎಂದು ಅಲ್ಲಿ ನಡೆಯುವ ಸಂಭಾಷಣೆಯಲ್ಲಿ ದೇವಿ ಹೇಳುತ್ತಾಳೆ. ಸತ್ಯ ಮಾತನಾಡಿದವಳು ನೀನೊಬ್ಬಳೆ ಎಂದು. ಕತ್ತಲಲ್ಲಿ ಪದ್ಮಿನಿ ತಿಳಿದೋ ತಿಳಿಯದೆಯೋ ಅವರೀರ್ವರ ತಲೆಯನ್ನು ಅದಲು ಬದಲು ಮಾಡುತ್ತಾಳೆ. ಆವಾಗ ದೇವಿ ಹೇಳುವ ಮಾತು ಮಗಳೇ ಸತ್ಯದಿಂದ ನಡೆಯೋದಕ್ಕೂ ಒಂದು ಮಿತಿ ಇರಬೇಕು. ಜೀವ ತಳೆದ ಅವರಿಬ್ಬರಲ್ಲಿ ಒಬ್ಬನಿಗೆ ತಲೆ ಭಾರ ಆದರೆ, ಮತ್ತೊಬ್ಬನಿಗೆ ದೇಹ ಭಾರ ಆಗುತ್ತದೆ. ತಮ್ಮಲ್ಲಿ ಆದ ಬದಲಾವಣೆಗೆ ಮೊದಲು ಸಂತೋಷ ಪಡುತ್ತಾರೆ. ಖುಶಿಯಿಂದ ಕುಣಿಯುತ್ತಾರೆ. ಮೊದಲಿನ ಸ್ನೇಹದ ಸಂಬಂಧ ಈಗ ರಕ್ತದ ಸಂಬಂಧದ ಕಲ್ಪನೆ ಅಮೋಘವಾಗಿದೆ.

ಒಬ್ಬ ತಪಸ್ವಿಯ ಮಾತಿನಂತೆ ಪದ್ಮಿನಿ ದೇವದತ್ತನ ತಲೆಇರುವವನ ಮಡದಿ ಆಗುತ್ತಾಳೆ. ಏಕೆಂದರೆ, ದೇಹದಲ್ಲಿ ತಲೆಯೇ ಪ್ರಮುಖವಾದುದು. ಪದ್ಮಿನಿ ಮತ್ತು ದೇವದತ್ತ ಊರಿಗೆ ಹೋದರೆ, ಕಪಿಲ ಕಾಡಿಗೆ ಹೋಗುತ್ತಾನೆ. - ಮತ್ತೆಂದೂ ಊರಿನ ಮುಖ ನೋಡುವುದಿಲ್ಲ. ಪದ್ಮಿನಿ ಈಗ ಸುಖಿ. ಹೆಣ್ಣು ಬಯಸುವ ಕಪಿಲನ ಗಂಡು ದೇಹ ಹಾಗೂ ದೇವದತ್ತನ ಬುದ್ಧಿವಂತ ತಲೆ ಆಕೆಗೆ ಸಿಕ್ಕಿದೆ. ಪ್ರೀತಿಗೆ ಸ್ಥಾನ ಇಲ್ಲದ್ದು ದುರಾದೃಷ್ಟ- ವೈಯಕ್ತಿಕ ಅಭಿಪ್ರಾಯ. ಶಿರ ಪ್ರಮುಖ ಅಂಗ. ಹಾಗಾಗಿ ದೇವದತ್ತ ಬದಲಾಗುತ್ತಾನೆ. ಮೊದಲಿನ ಕಸುವು. ಮೊದಲಿನ ದೈಹಿಕ ಲವಲವಿಕೆ ಕಡಿಮೆ ಆಗುತ್ತಾ ಹೋಗುತ್ತದೆ - ಆತ ಮೊದಲಿನಂತೆಯೇ ಕೃಷನಾಗುತ್ತಾ ಮೊದಲಿನ ದೇವದತ್ತ ಆಗುತ್ತಾನೆ. ಆತನ ಸ್ಪರ್ಶದಿಂದ, ಆತನಲ್ಲಾಗಿರುವ ಬದಲಾವಣೆಗೆ ಪದ್ಮಿನಿ ಕಂಪಿಸುತ್ತಾಳೆ. ಆಕೆಗೆ ಮರೆತು ಹೋದ ಕಪಿಲ ಪುನಃ ನೆನಪಾಗುತ್ತಾನೆ. ದೇವದತ್ತನಲ್ಲಾಗುವ ಬದಲಾವಣೆ, ಪದ್ಮಿನಿಯ ಮನಸ್ಥಿತಿ, ಆಕೆಯ ಕನಸ್ಸು ಎಲ್ಲವನ್ನೂ ಮಗುವಿನ ಗೊಂಬೆಗಳ ಮುಖಾಂತರ ಕಾರ್ನಾಡರು ಸುಂದರವಾಗಿ ಹೇಳುತ್ತಾರೆ. ಮುಗಿವಗೆ ಹೊಸ ಗೊಂಬೆ ತರಲು ಗಂಡನನ್ನು ದೂರ ಕಳುಹಿಸಿದ ಪದ್ಮಿನಿ, ಮಗುವಿನೊಂದಿಗೆ ಕಾಡಿನ ದಾರಿ ಹಿಡಿಯುತ್ತಾಳೆ. ಕಾಡಿಗೆ ಹೊರಟ ಪದ್ಮಿನಿ ಮಗುವಿಗೆ ಹೇಳುವ ಮುತ್ತೈದೆಯ ಮರ ಕಪಿಲನ ನೆನಪು ಮೂಡಿಸುತ್ತದೆ. ಹಳೆಯ ಗುರುತಿನ ಅಚ್ಚು ಮೆಚ್ಚಿನ ಗಿಡ. ಅದನ್ನು ಮಾತನಾಡಿಸಿ ನಮಸ್ಕಾರ ಅಂದು ಬರಬೇಕು. ಕಾಡನ್ನು ಒಳ ಹೊಕ್ಕೆ ಆಕೆ ಕಪಿಲನ ಜಾಗವನ್ನು ಪತ್ತೆ ಮಾಡಿ ಆತನಲ್ಲಿ ಹೋಗುತ್ತಾಳೆ. ಮಗನಿಗೆ ನದಿಯ ಜೊತೆ ನಕ್ಕು ಗೊತ್ತಿಲ್ಲ. ತಂಗಾಳಿಗೆ ನಡುಗಿ ಗೊತ್ತಿಲ್ಲ. ಕಾಲಿಗೆ ಮುಳ್ಳು ಚುಚ್ಚಿ ಅತ್ತು ಗೊತ್ತಿಲ್ಲ. ಆಕೆಗೆ ಮಗನನ್ನು ಪೂರ್ಣ ಮನುಷ್ಯನನ್ನಾಗಿ ಮಾಡುವ ಆಸೆ. ಅನುಭವದಿಂದ ಕಲಿತ ಪಾಠ ಮುಂದೆ ಕಪಿಲ ಪದ್ಮಿನಿಯರ ನಡುವೆ ಸಂಭಾಷಣೆ ತುಂಬಾ ವಿಚಾರಪೂರ್ಣವಾಗಿದೆ. ಕಪಿಲನ ನೋವು, ಪದ್ಮಿನಿಯ ತೊಳಲಾಟ ತುಂಬಾ ಹೊತ್ತು ನಮ್ಮ ಮನಸ್ಸನ್ನು ಕಲಕುತ್ತದೆ. ಕಪಿಲ ಆಕೆಯಲ್ಲಿ ತನ್ನ ನೆನಪನ್ನು ಯಾಕೆ ಕೆದಕಿದೆಯೆಂದು ಕೇಳುತ್ತಾ ಆಕೆಗೆ ಹಿಂದೆ ಹೋಗಲು ಹೇಳುತ್ತಾನೆ. ''ತಲೆಗೆ ನೆನಪಿರುವ ಹಾಗೆ ತೊಗಲಿಗೂ ನೆನಪಿರುತ್ತದೆ ಗೊತ್ತೇನು" ಅನ್ನುತ್ತಾನೆ. ''ನೀ ನನ್ನ ಮುಟ್ಟಿದಾಗ ಎಲ್ಲೋ ಮುಟ್ಟಿದ ನೆನಪು - ಎಲ್ಲೆಂದು ಗೊತ್ತಾಗುವುದಿಲ್ಲ. - ಹಿಂದೆ ನನ್ನ ಮುಟ್ಟಿದಾಗ ಈ ತಲೆ ಇರಲಿಲ್ಲ ನೋಡು" ಅನ್ನುತ್ತಾನೆ. ''ಆದರೆ ಈ ಅಸಹ್ಯ ಮೈ ಮಾತ್ರ ಹಳೆಯ ಗೆಳೆಯನನ್ನು ಕಂಡ ಹಾಗೆ ನಿನ್ನ ಸ್ಪರ್ಶಕ್ಕೆ ಹೂ ಬಿಟ್ಟಿತು."

''ನನ್ನ ಅಪೂರ್ಣತೆಯ ಅರಿವನ್ನೇ ಹುದುಗಿ ಬಿಟ್ಟಿದ್ದೆ. ನೀನು ಉಗುರಿನಿಂದ ಕೆದರಿ ಮತ್ತೆ ಅಗೆದು ತೆಗೆದೆ". "ಯಾಕೆ ಬಂದೆ? ಕಾಡುತ್ತಿದ್ದ ನೆನಪುಗಳನ್ನೆಲ್ಲ ಕಿತ್ತು ಹಾಕುವಷ್ಟರಲ್ಲಿ ಮತ್ತೆ ಯಾಕೆ ಬೆನ್ನಟ್ಟಿ ಬಂದೆ? ಮೈ ಮತ್ತು ತಲೆಯ ನಡುವೆ ಬಿರುಕು ಇಲ್ಲದಿದ್ದ ಕಪಿಲ. ಈಗ ಇನ್ನೇನು ಬೇಕು ನಿನಗೆ ದೇವದತ್ತ ಒಂದೇ ರಾತ್ರಿಯಲ್ಲಿ ಬದಲಾಗಿ ಮೊದಲಿನ ಹಾಗೆ ಆಗಿ ಬಿಟ್ಟಿದ್ದರೆ ನಾನು ನಿನ್ನನ್ನು ಪೂರಾ ಮರೀತಿದ್ದೆ. ಆದರೆ ಹಾಗಾಗಲಿಲ್ಲ. ಅವನು ಬದಲಾಗುತ್ತಾ ಹೋದ ಹಾಗೆ, ನಿನ್ನ ನೆನಪು ತೀವ್ರವಾಗಿ ಓಡಿ ಬಂದೆ.

ಕಪಿಲನಿಗೆ ಆಕೆ ಹೇಳುವ ಮಾತು. 'ನಿನ್ನ ಮೈ ಯಾವುದೋ ನದಿಯಲ್ಲಿ ಮಿಂದು ನಲಿದು. ಸುಖಪಟ್ಟಿತು. ಆ ನದಿ ಯಾವುದು. ಆ ಈಸು ಯಾವುದು ತಲೆಗೆ ತಿಳ್ಕೋದು ಬೇಡೇನು? ನಿನ್ನ ತಲೆ ಆ ನದಿಯಲ್ಲಿ ಮುಳುಗಬೇಕು. ಮುಖವನ್ನು ತನ್ನೆದೆಗೆ ಅದುಮಿ ಹಿಡಿಯಬೇಕು ಅಲ್ಲಿಯವರೆಗೂ ಅಪೂರ್ಣ ನೀನು. ದೇವದತ್ತ ಪದ್ಮಿನಿ ಮತ್ತುಮಗುವನ್ನು ಹುಡುಕಿಕೊಂಡು ಅಲ್ಲಿಗೇ ಬರುತ್ತಾನೆ. ಕಪಿಲ ದೇವದತ್ತರ ಸಂಭಾಷಣೆಯನ್ನು ನೋಡಿ

ನನಗೆ ನಿನ್ನ ಶಕ್ತಿ ಬೇಕಾಗಿತ್ತು. ಆದರೆ, ಕಾಡು ಪ್ರೇರಣೆಗಳು ಬೇಕಾಗಿದ್ದಿಲ್ಲ. ನೀನು ದ್ವೇಷದಲ್ಲಿ ಬಾಳಿದೆ. ನಾನು ಭಯದಲ್ಲಿ ಕಪಿಲ ಇಲ್ಲ ಹೆದರಿ ಬಾಳಿದವನು ನಾನು. ಇಬ್ಬರೂ ಪದ್ಮಿನಿಯನ್ನು ಪ್ರೀತಿಸುವುದಾಗಿ ಒಪ್ಪಿಕೊಳ್ಳುತ್ತಾರೆ. ಆದರೆ ಪಾಂಡವರ ತರಹ ಮೂವರೂ ಒಟ್ಟಿಗೆ ಇರುವುದು ಅಸಾಧ್ಯ ಎಂದು ಒಪ್ಪಿಕೊಳ್ಳುತ್ತಾರೆ. ಗೆಳೆಯರಿಬ್ಬರೂ ಪ್ರೀತಿಯಿಂದಲೇ ಒಬ್ಬರನ್ನೊಬ್ಬರು ಇರಿದು ಸಾಯುತ್ತಾರೆ. ಪದ್ಮಿನಿ ತಾನೂ ಚಿತೆ ಏರುತ್ತಾಳೆ. ಸಾಯುವ ಮುನ್ನ ಮುಗವನ್ನು ಭಾಗವತರ ಕೈಯಲ್ಲಿ ಇತ್ತು. ಮೊದಲ ಐದು ವರ್ಷ ಕಾಡಿನ ಶಬರನಿಗೆ ಕಪಿಲನ ಮಗನೆಂದು ಕೊಡಲು ಹೇಳುತ್ತಾಳೆ. ನಂತರ ದೇವದತ್ತನ ಮಗನೆಂದು ಆತನ ತಂದೆಗೆ ಒಪ್ಪಿಸಲು ಹೇಳುತ್ತಾಳೆ. ಸಾಯುವಾಗ ತನ್ನ ಮಗನಾದರೂ ಪೂರ್ಣ ಮನುಷ್ಯಬನಾಗುವ ಬಯಕೆ ಆಕೆಗೆ. ಈ ನಾಟಕದಲ್ಲಿ ಹಯವದನ ಅಪೂರ್ಣತೆಯ ಸಂಕೇತ. ಕಥೆ ಹಯವದನ ಪೂರ್ಣಾಂಗನಾಗುವುದು ಇತ್ಯಾದಿಯಲ್ಲಿ ಮುಂದುವರಿಯುತ್ತದೆ. ಈ ನಾಟಕ ಓದಿ ಮುಗಿಸಿದ ನಂತರ, ಮನಸ್ಸಿನಲ್ಲಿ ಕಾಡುವ ಈ ಪಾತ್ರಗಳು, ನಂತರ ಒಂದು ಪ್ರಶ್ನೆ ಏಳುತ್ತದೆ. ನಾವು ''ಪೂರ್ಣ''ರಾಗಲು ಸಾಧ್ಯವಿಲ್ಲವೆ? ನಮ್ಮಲ್ಲಿ ಒಂದಲ್ಲ ಒಂದು ಕೊರತೆ ಇರುವುದು ವಿಧಿ ಲಿಖಿತವೇ? ಗಂಡು ಹೆಣ್ಣಿನ ನಡುವೆ ಪ್ರೀತಿ ಒಂದು ಸಾಕಾಗುವುದಿಲ್ಲವೆ? ನಮ್ಮಲ್ಲಿರುವ ಕೊರತೆಯ ಅರಿವು ನಮ್ಮ ನಿರಾಶೆಗೆ ಕಾರಣವೆ ಅಥವಾ ನಮ್ಮ ಅಭಿವೃದ್ಧಿಗೆ ಕಾರಣವೇ? ಹಯವದನ ಕೊನೆಯಲ್ಲಿ ಒಂದು ಮಾತು ಹೇಳುತ್ತಾನೆ. ಇಂಥ ಭಾವನಾ ವಿವಶತೆಯಿಂದಲೇ ನಮ್ಮ ಸಾಹಿತ್ಯ ಕೆಟ್ಟು ಹೋಗಿದೆ. ನಮ್ಮ ಜೀವನ ಜಡ್ಡಾಗಿದೆ.

**ನಾಗಮಂಡಲ**

ನಾಗಮಂಡಲ ಗಿರೀಶ್ ಕಾರ್ನಾಡ ವಿರಚಿತ ಪ್ರಸಿದ್ಧ ನಾಟಕ. ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದ ಈ ನಾಟಕ ಹಲವು ಭಾರತೀಯ ಹಾಗೂ ವಿದೇಶಿ ಭಾಷೆಗಳಲ್ಲಿ ತರ್ಜುಮೆಗೊಂಡಿದೆ. 1988 ರಲ್ಲಿ ರಚನೆಗೊಂಡ ಈ ನಾಟಕವನ್ನು 1990ರಲ್ಲಿ ಕಾರ್ನಾಡರೆ ಆಂಗ್ಲ ಭಾಷೆಗೆ ಭಾಷಾಂತರಿಸಿದರು. 1992ರಲ್ಲಿ ಈ ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರಕಿತು. ನಾಗಮಂಡಲ ನಟಕವು ಹಲವಾರು ಭಾಷೆಗಳಲ್ಲಿ ಹಲವು ರೀತಿಯ ಪ್ರಯೋಗಕ್ಕೆ ಒಳಪಟ್ಟು ಜನಪ್ರಿಯವಾಗಿದೆ. ಭಾರತೀಯ ಜಾನಪದ ಸೊಗಡಿನ ಈ ನಾಟಕ ಕೇವಲ ಭಾರತವಲ್ಲದೆ ಅಮೇರಿಕವು ಸೇರಿದಂತೆ ವಿಶ್ವದ ಹಲವು ದೇಶಗಳಲ್ಲಿ ಯಶಸ್ವಿ ಪ್ರದರ್ಶನ ಕಂಡಿದೆ. ಇದು ಜಾನಪದ ಕಥೆಯೊಂದರ ಮೇಲೆ ಆಧಾರಿತವಾದ ನಾಟಕವಾಗಿದೆ. ಇಲ್ಲಿ ಸಾಂಪ್ರದಾಯಿಕ ಸಮಾಜದಲ್ಲಿನ ಗಂಡು-ಹೆಣ್ಣಿನ ಸಂಬಂಧವನ್ನು ಶೋಧಿಸುತ್ತದೆ ಮತ್ತು ವ್ಯಾಖ್ಯಾನಿಸುತ್ತದೆ. ನಾಟಕದಲ್ಲಿ ರಾಣಿಯನ್ನು ಮದುವೆಯಾದ ಅಪ್ಪಣ್ಣ ರಾತ್ರಿ ಮನೆಗೆ ಬರುವುದಿಲ್ಲ. ಮನೆ ಬಿಡುವಾಗ ತನ್ನ ಹೆಂಡತಿಯನ್ನು ಮನೆಯಲ್ಲಿ ಕೂಡಿ ಹಾಕಿ ಹೊರಹೋಗುತ್ತಾನೆ. ರಾಣಿ ಪ್ರೀತಿಗಾಗಿ ಹಂಬಲಿಸುತ್ತಾಳೆ. ರಾಣಿಗೆ ಆ ಪ್ರೀತಿ ಸಿಗುರುವುದ ತನ್ನ ಗಂಡನ ರೂಪ ಧರಿಸಿ ರಾತ್ರಿ ಬರುವ ನಾಗರಹಾವಿನಿಂದ. ರಾತ್ರಿಯಲ್ಲಿ ಪ್ರೀತಿತೋರುವ ಗಂಡ ಹಗಲಲ್ಲಿ ತನ್ನನ್ನು ಮುಟ್ಟದೆ ಹೆದರಿಸಿ, ಬೆದರಿಸಿ ಕೂಡಿಹಾಕಿ ಏಕೆ ಹೋಗುತ್ತಾನೆ ಎಂದು ರಾಣಿ ಚಡಪಡಿಸುತ್ತಾಳೆ. ರಾಣಿಗೆ ಯಾವುದು ವಾಸ್ತವ, ಯಾವುದು ಸ್ವಪ್ನ ಎಂದು ಅರ್ಥವಾಗುವುದಿಲ್ಲ. ರಾತ್ರಿ -ಹಗಲಿನ ಒಂದು ಆಟದಂತೆ ಸಾಗುವ ನಾಟಕದ ನಾಟಕೀಯತೆ ಲೇಖಕರ ರಚನಾ ಕೌಶಲ್ಯವನ್ನು ಸಾರುತ್ತದೆ. ನಾಗಮಂಡಲ ಸಾಂಪ್ರದಾಯಿಕ ಸಮಾಜದಲ್ಲಿನ ಹೆಣ್ಣಿನ ಅವಸ್ಥೆಯನ್ನು ಚಿತ್ರಿಸುವುದಲ್ಲದೆ, ಅವಳ ಅಭಿವ್ಯಕ್ತಿಗೆ ಅವಕಾಶ ಮಾಡಿಕೊಡುತ್ತದೆ. ಒಟ್ಟಾರೆಯಾಗಿ ಕಾರ್ನಾಡರು ಕನ್ನಡ ನಾಟಕ ಸಾಹಿತ್ಯದಲ್ಲಿ ತಮ್ಮದೇ ಆದ ಸ್ಥಾನವನ್ನು ಪಡೆದುಕೊಂಡಿದ್ದಾರೆ. ಪಾಶ್ಚಿಮಾತ್ಯ ಹಾಗೂ ದೇಸಿ ಸಾಹಿತ್ಯವನ್ನು ಕನ್ನಡ ರಂಗಭೂಮಿಗೆ ನೀಡಿದ್ದಾರೆ.

ಪರಾಮರ್ಶನ ಗ್ರಂಥಗಳು

1. ಸಾಲುದೀಪಗಳು, ಕರ್ನಾಟಕ ಸಾಹಿತ್ಯ ಆಕಾಡೆಮಿ ಬೆಂಗಳೂರು 2001.
2. ಹೊಸತು ಹೊಸತು, ಡಾ.ಚಿದಾನಂದ ಮೂರ್ತಿ, ಸ್ವಪ್ನ ಬುಕ್‌ಹೌಸ್ ಬೆಂಗಳೂರು 2010.
3. ಗಿರೀಶ್ ಕಾರ್ನಾಡರ ನಾಟಕಗಳು, ಮನೋಹರ ಗ್ರಂಥಮಾಲಾ
4. ಚಂಪಾ ನಾಟಕಗಳು, ಚಂದ್ರಶೇಖರ್ ಪಾಟೀಲ್, ಸ್ವಪ್ನ ಬುಕ್‌ಹೌಸ್ ಬೆಂಗಳೂರು 2017.
5. ಬೇರು ಕಾಂಡ ಚಿಗುರು, ನಾರಾಯಣ ಕೆ.ವಿ, ವಿವೇಕ ಪ್ರಕಾಶನ ಬೆಂಗಳೂರು 1997.